# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 1158/2023

**ಚಾಸಾ–4 ಪ್ರಾಸಾ–4**

| | | |
|---|---|---|
| ಹೆಸರು | – | ರಾಜು |
| ತಂದೆಯ ಹೆಸರು | – | ಕೊರಗುಶೆಟ್ಟಿ |
| ವಯಸ್ಸು | – | 41 ವರ್ಷ |
| ವೃತ್ತಿ | – | ಖಾಸಗಿ |
| ವಾಸಸ್ಥಳ | – | ಹೊಸನಗರ. |

(ದಿನಾಂಕಃ **31.10.2025** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 04.02.2023 ರಂದು 4 ಗಂಟೆಗೆ ನನಗೆ ಚಾಸ2 ರವರು ಒಂದು ಫೋನ್ ಕರೆ ಮಾಡಿ ಪಿ.ಎಲ್.ಡಿ ಬ್ಯಾಂಕಿನಲ್ಲಿ ಶಬ್ದ ಕೇಳಿಬರುತ್ತಿದೆ ಎಂದು ನನ್ನನ್ನು ಕರೆದಿರುತ್ತಾರೆ. ನಾನು ಬಂದು ಬ್ಯಾಂಕನ್ನು ನೊಡಿದಾಗ ಬ್ಯಾಂಕಿನ ದ್ವಾರದ ಬೀಗ ಒಡೆದಿತ್ತು ನಂತರ ನಾನು ಪೊಲಿಸ್ ಠಾಣೆಗೆ ಹೋಗಿ ಮಾಹಿತಿ ಕೊಟ್ಟು ಬಂದಿರುತ್ತೇನೆ.

2. ನಾವು ವಾಪಸ್ಸು ಬಂದಾಗಲು ಶಬ್ದ ಕೇಳಿಬರುತ್ತಿತ್ತು. ಪೊಲಿಸರು ಬರುವವರೆಗೆ ನಾವು ಕಾದಿರುತ್ತೇವೆ. ನಾನು ಮತ್ತು ಚಾಸ2 ರವರು ಬ್ಯಾಂಕಿನ ಒಳಗೆ ಹೋಗಿ ನೊಡಿದಾಗ ಕತ್ತಲು ಇತ್ತು. ಜರ್ಕಿನ್ ಮತ್ತು ಹೆಲ್ಮೆಟ್ ಧರಿಸಿದ ಒಬ್ಬ ದಪ್ಪ ವ್ಯಕ್ತಿ ಇದ್ದರು ಅವರು ಯಾರು ಎಂದು ಗುರುತಿಸಲು ಆಗಿರುವುದಿಲ್ಲ.

3. ನಾವು ಹಿಡಿಯಲು ಪ್ರಯತ್ನಿಸಿದಾಗ ಅವನು ನಮ್ಮ ಮೇಲಿ ಬಿದಿದ್ದರಿಂದ ಆತನು ನಮ್ಮನ್ನು ಕೆಡವಿ ಓಡಿ ಹೋಗಿರುತ್ತಾರೆ. ಹೊರಗಡೆ ಬೆನ್ನತ್ತಿದಾಗ ಅವರು ಸಿಕ್ಕಿರುತ್ತಾರೆ. ಆತನು ಆರೋಪಿ

ಎಂದು ಕಂಡು ಬಂದಿರುತ್ತದೆ. ನಾನು ಈ ವಿಚಾರವನ್ನು ಬ್ಯಾಂಕಿನ ಮ್ಯಾನೇಜರ್ ಆದ ಚಾಸ 1 ಮತ್ತು ಅಧ್ಯಕ್ಷರಿಗೆ ತಿಳಿಸಿರುತ್ತೇನೆ.

4. ಸದರಿ ಘಟನೆ ಹಿನೆಲೆಯಿಂದ ನಾನು ಪೊಲಿಸರ ಮುಂದೆ ಹೇಳಿಕ ಕೊಟ್ಟಿರುತ್ತೇನೆ. ಆದಿನ ಓಡಿ ಹೋದ ವ್ಯಕ್ತಿಯನ್ನು ನೊಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ಕಲಂ 317 ರ ಅರ್ಜಿಯೊಂದಿಗೆ ಮೆಮೊ ಆಫ್ ಅಂಡರ್ ಟೇಕಿಂಗ್ ಅನ್ನು ನೀಡಿದ್ದು ಅದನ್ನು ಷರತ್ತಿನೊಂದಿಗೆ ಅಂಗೀಕರಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿ.ಹೆಚ್ ರವರಿಂದಃ</u>**

1. ನಾನು ಪಿ.ಎಲ್.ಡಿ ಹೊಸನಗರ ಬ್ಯಾಂಕಿನಲ್ಲಿ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನನಗೆ ಚಾಸ 2 ರವರು ಬೆಳಗ್ಗಿನ ಜಾವ 4.20 ರ ಸಮಯದಲ್ಲಿ ಕರೆ ಮಾಡಿರುತ್ತಾರೆ. ಆಗ ನಾನು ಮನೆಯಲ್ಲಿ ಮಲಗಿರುತ್ತೇನೆ.

2. ನನಗೆ ಚಾಸ 2 ರವರು ಬ್ಯಾಂಕಿನಲ್ಲಿ ಶಬ್ದ ಬರುತ್ತಿದೆ ತಾನು ಹೋಗಿರುವುದಿಲ್ಲ ನೊಡೊಣ ಬನ್ನಿ ಎಂದು ಹೇಳಿರುತ್ತಾರೆ ನಾನು ತಕ್ಷಣ ಎದ್ದು ಬಂದಿರುತ್ತೇನೆ. ನಾನು ಬ್ಯಾಂಕಿನಲ್ಲಿ ಶಬ್ದ ಕೇಳುತ್ತಿರುವುದನ್ನು ಕಂಡು ಬ್ಯಾಂಕಿನ ಅಧ್ಯಕ್ಷ ಮತ್ತು ಮ್ಯಾನೇಜರ್ ಗೆ ತಿಳಿಸಿರುತ್ತೇನೆ.

3. ನಾನು ತಕ್ಷಣ ಪೊಲಿಸರಿಗೆ ಕರೆ ಮಾಡಿರುವುದಿಲ್ಲ ನಾವು ನೇರವಾಗಿ ಠಾಣೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಪೊಲಿಸ್ ಠಾಣೆಗೆ ಹೋಗಿ ಸದರಿ ವಿಚಾರ ತಿಳಿಸಿದ ನಂತರ ಪೊಲಿಸರು ನಮ್ಮ ಜೊತೆ ಬಂದಿರುವುದಿಲ್ಲ ಎಂದರೆ ಸರಿ.

4. ನಾವು ಪೊಲಿಸರಿಗೆ ಬ್ಯಾಂಕಿನಲ್ಲಿ ಆಗುತ್ತಿರುವ ಶಬ್ದ ತಿಳಿಸಿದ ನಂತರ ಸುಮಾರು 10 ನಿಮಿಷ ತಡವಾಗಿ ಬಂದಿರುತ್ತಾರೆ. ಪೊಲಿಸರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿಯು ರಸ್ತೆಯ ಮೇಲೆ ಓಡಿ ಹೊಗುತ್ತಿದ್ದರು. ನಾವು ಮತ್ತು ಪೊಲಿಸರು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

5. ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದು ಸೂಚಿಸಿದರೆ ಸರಿ. ನಮ್ಮ ಬ್ಯಾಂಕಿನ ಮಧ್ಯ ಮತ್ತು ಆರೋಪಿಯ ಮಧ್ಯ ಸಾಲದ ಬಡ್ಡಿಯ ಬಗ್ಗೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

6. ನಾವು ಆರೋಪಿಯ ಮೇಲೆ ವೈ ಮನಸ್ಸು ಇಟ್ಟುಕೊಂಡು ಆರೋಪಿಯು ನಮ್ಮ ಬ್ಯಾಂಕಿನಲಿ ಬಡ್ಡಿ ಹಣ ಕಟ್ಟದೇ ಇರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. ನಾವು ಆರೋಪಿಯನ್ನು ಓಡಿ ಹೋಗಿ ಹಿಡಿದಿರುವುದಿಲ್ಲ ಮತ್ತು ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಕಳ್ಳತನ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

7. ನ್ಯಾಯಾಲಯದ ಮುಂದೆ ಆ ದಿನ ಆರೋಪಿಯು ದರಿಸಿರುತ್ತಾರೆ ಎಂದು ಹೇಳುವ ಜರ್ಕಿನ್ ಮತ್ತು ಹೆಲ್ಮೇಟ್ ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.